ಡಾ: ಶ್ರೀನಿವಾಸ್ ಕುಲಕರ್ಣಿ 1 ವರ್ಷದಿಂದ 1 ಬಾರಿ ವೈದ್ಯರು ಅಲ್ಲದೆ, 26 ಜನ ಸಿ ಗುಂಪಿನ ನೌಕರರು 1997ರಿಂದ ಇದುವರೆವಿಗೂ ವಸತಿ ಗೃಹ ಕೋರಿ ಒಂದು ಬಾರಿ ಅರ್ಜಿ ಸಲ್ಲಿಸಿರುತ್ತಾರೆ.

(ಈ) ವಸತಿ ಗೃಹಗಳು ಖಾಲಿ ಆದ ಲಕ್ಷಣ ಆಯಾಯ ವೃಂದದಲ್ಲಿ ನೋಂದಣಿ ಮಾಡಿಸಿದವರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.

673 (912) ಶ್ರೀ ಶಂಕರಲಿಂಗೇಗೌಡ ಹೆಚ್.ಹೆಸ್. (ಚಾಮರಾಜ) :- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೈಸೂರು ನಗರದಲ್ಲಿರುವ ಸರಸ್ವತಿಪುರಂ ಪ್ರಾಥಮಿಕ ಆರೋಗ್ಯ ಘಟಕ/ಕೇಂದ್ರ ಪ್ರಾರಂಭವಾದದ್ದು ಯಾವಾಗ ;

(ಆ) ಈ ಘಟಕ/ಕೇಂದ್ರದ ಅತ್ಯಂತ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಈ ಕಟ್ಟಡದ ದುರಸ್ಥಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

(ಅ) ಮೈಸೂರು ನಗರದಲ್ಲಿರುವ ಸರಸ್ವತಿಪುರಂ ಪ್ರಾಥಮಿಕ ಆರೋಗ್ಯ ಘಟಕ ಪ್ರಾರಂಭವಾದದ್ದು ದಿನಾಂಕ : 2-11-1951.

(ಆ) ಬಂದಿದೆ.

(ಇ) ಸದರಿ ಘಟಕದ ಕಟ್ಟಡದ ದುರಸ್ತಿಗಾಗಿ ಅಂದಾಜು ಪಟ್ಟಿ ತಯಾರಿಸಿ ಕಳುಹಿಸಲು ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ತಾಂತ್ರಿಕ ವಿಭಾಗ ಮೈಸೂರು ಇವರಿಗೆ ತಿಳಿಸಲಾಗಿದೆ. ಅದು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.